(II) ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ವಂಶಾರನೆಯಂ ದರ್ಜೆಯ ನೌಕರರಿಗೆ ನೇಮಕಾತಿ ನಿಯಮಗಳನ್ನು ರಚಿಸುವುದು.

ಶ್ರೀ ಕೆ.ಬಿ. ಶಾಣಪ್ಪ.--ಮಾನ್ಯ ಅಧ್ಯಕ್ಷರೇ, ೯೭೦ ರಿಂದ ಪದವಿಪೂರ್ವ ಶಿಕ್ಷಣ ಇಲಾಖೆ (ಪಿ.ಯು.ಸಿ. ಬೋರ್ಡ್) ಪ್ರಾರಂಭವಾಯಿತು. ಇದು ಹೊಸದಾಗಿ ಪ್ರಾರಂಭವಾದ ಇಲಾಖೆಯಾದುದರಿಂದ, ಸರ್ಕಾರದ ವಿವಿಧ ಇಲಾಖೆಗಳಿಂದ ನಿಯೋಜನೆಯ ಮೇಲೆ ಸಿನೇ ದರ್ಜೆಯ ನೌಕರವರ್ಗವನ್ನು ನೇಮಕ ಮಾಡಿಕೊಳ್ಳಲಾಯಿತು. ಈ ಮಧ್ಯದಲ್ಲಿ ಪಿ.ಯು.ಸಿ., ಬೋರ್ಡ್‌ನವರು ತಮ್ಮದೇ ಆದ ಸಿಬ್ಬಂದಿ ವರ್ಗವನ್ನು ಕೆ.ಪಿ.ಎಸ್.ಸಿ., ಯಿಂದ ನೇರ ನೇಮಕಾತಿ ಮಾಡಿಕೊಂಡರು. ಅವರು ಸುಮಾರು ೮೦ ಜನ ಇದ್ದು ೧೪ ವರ್ಷಗಳಿಂದ ಈ ಇಲಾಖೆಯಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇಷ್ಟು ವರ್ಷಗಳಾದರೂ ಅವರಿಗೆ ಹುದ್ದೆ ಮತ್ತು ನೇಮಕಾತಿ ನಿಯಮಗಳನ್ನು ನೀಡಿಸಿಲ್ಲ. ಈ ಬಗ್ಗೆ ಒಂದು ಕರಡು ಶಿಫಾರಸ್ಸು ಸರ್ಕಾರದ ಮುಂದೆ ಇದೆ. ಆದರೆ ಇನ್ನೂ ವರೆಗೆ ಅವರು ಯಾವ ತೀರ್ಮಾನವನ್ನೂ ಕೈಕೊಂಡಿಲ್ಲದೇ ಇರುವುದರಿಂದ ಕೆ.ಪಿ.ಎಸ್.ಸಿ, ಯಿಂದ ನೇರವಾಗಿ ಈ ಇಲಾಖೆಗೆ ಸೇವೆ ಸಲ್ಲಿಸಲು ಬಂದ ಸಿಬ್ಬಂದಿವರ್ಗಕ್ಕೆ ಅನ್ಯಾಯವಾಗಿ ಅವರಿಗೆ ತಮ್ಮ ಭವಿಷ್ಯದ ಬಗ್ಗೆ ತಿಳಿಯದಂತಾಗಿದೆ. ಈ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಈ ಸಿಬ್ಬಂದಿ ವರ್ಗದ ಬಗ್ಗೆ ತಕ್ಷಣ ಕ್ರಮ ಕೈಕೊಳ್ಳುವಂತೆ ಅವರ ಗಮನವನ್ನು ತಮ್ಮ ಮೂಲಕ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.--ಸನ್ಮಾನ್ಯ ಅಧ್ಯಕ್ಷರೇ, ಶಿಕ್ಷಣ ಮಂತ್ರಿಯವರಿಗೆ ಈ ವಿಚಾರವನ್ನು ತಿಳಿಸಿ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ.

(III) ದಂಡಾವತಿ ನದಿಗೆ ಅಣೆಕಟ್ಟು ಕಟ್ಟುವ ಬಗ್ಗೆ

ಶ್ರೀ ಬಿ. ಧರ್ಮಪ್ಪ.--ಮಾನ್ಯ ಅಧ್ಯಕ್ಷರೇ, ಸೊರಬ ತಾಲ್ಲೂಕಿನಲ್ಲಿ ದಂಡಾವತಿ ನದಿಗೆ ಅಣೆಕಟ್ಟು ಕಟ್ಟಲು ಈ ಹಿಂದೆ ಸರ್ವೆ ನಡೆದಿದ್ದು, ಇದುವರೆಗೆ ಅದು ಕಾರ್ಯರೂಪಕ್ಕೆ ಮಾತ್ರ ಬಂದಿರುವುದಿಲ್ಲ. ಈ ದಂಡಾವತಿ ಯೋಜನೆಯಿಂದ ಸೊರಬ ತಾಲ್ಲೂಕಿನ ಸುಮಾರು ೨ ಹೋಬಳಿಗಳಿಗೆ ನೀರು ಲಭಿಸುವುದಿದ್ದು, ಪದೇ ಪದೇ ಬರಗಾಲವನ್ನು ಅನುಭವಿಸುತ್ತಿರುವ ಈ ಭಾಗದ ರೈತರಿಗೆ ಇದು ಒಂದು ವರಪ್ರಸಾದವಾಗಬೇಕಿತ್ತದೆ. ಇದು ಬಹಳ ದಿವಸದ ಬೇಡಿಕೆಯಾಗಿದ್ದು, ಈಗಲಾದರೂ ಸರ್ಕಾರದವರು ಈ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂದು ಲೊಕೋಪಯೋಗಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.--ಸನ್ಮಾನ್ಯ ಸದಸ್ಯರು ನನ್ನ ಗಮನವನ್ನು ಇದರ ಬಗ್ಗೆ ಸೆಳೆದಿದ್ದಾರೆ ನಾನು ಇದನ್ನು ಪರಿಶೀಲನೆ ಮಾಡುತ್ತೆನೆ.

12-00 NOON

IV. ಕುಮಾರಿ ಜೆ. ಜಯಮೇರಿಯವರ ಮೇಲೆ ಕುಶಾಲನಗರದ ತಾಂತ್ರಿಕ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯರು ಅತ್ಯಾಚಾರವೆಸಗಿರುವುದಂ

SMT. MUKTHARUNNISA.–Mr Speaker, it is reported in a daily news paper 'Parakram' dated 15th December 1985, that Shri V. Ramakrishna Reddy, Principal of Kushalanagar Teachnical Education Institute, attempted to molest Kum. J. Jayamary, aged about 22 years, working in the same institution and she died due to this. It is also ascertained that the lady employees of the said institution had complained to the Director of Technical Education and requested him to take suitable action. It is also ascertained that the Director had assured them that suitable action would be taken against him.

In spite of his assurance, the said Principal is continued in that institution. The Superintendent who is also working in the same institution and who is a supporter of the Principal is harassing the employees of the institution. Complaints have also been received against the Principal that he is trying to take revenge against the employees who have complained to the Director. It is also reported that he is trying to destroy the proof regarding the above incidence available in the office. Hence I urge the Government to take suitable immediate action in the matter.

ಶ್ರೀ ಎ. ಲಕ್ಷ್ಮೀಸಾಗರ್. —ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಗೃಹ ಸಚಿವರಿಂದ ಆವರಿಗೆ ಉತ್ತರ ತರಿಸಿ ಕೊಡುತ್ತೇನೆ.

V. ಬೆಂಗಳೂರಿನ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎರಡನೇ ತರಗತಿ ವಿದ್ಯಾರ್ಥಿಯಾದ ಉದಯಂರವಿ ಸಾವಿನ ಬಗ್ಗೆ.

SRI S. BANGARAPPA.—Mr. Speaker, Mr. Udaya Ravi a student of II year B.E. in Bangalore Institute of Technology, Bangalore has ended his life by hanging himself in his house on Wednesday 12th March, 1986 after receiving information from the University authorities that he was being debarred from appearing in the ensuing examinations for malpractices. But, the students of the B.I.T. claim that the answer sheets of Mr. Ravi in respect of drawing had been changed by someone by which Mr. Ravi was victimised. In protest of the stand taken by the university authorities, the student of B.I.T. did not attend classes and have also took out a procession demanding identification of the culprit. Besides they demand to set a specific time for with-held cases, announcement of results, marks card issue and relevant other problems. Such lapses on the part of the University authorities and authorities of Education Department have been leading to the suicides by some innocent student. I would like to know from Government the action taken in each of such cases.

SRI A. LAKSHMISAGAR.—Sir, the Hon'ble Minister for Education has already stated that he would institute an enquiry and take suitable action in the matter.

VI. ಜಮಖಂಡಿ ನಗರದ ವಕೀಲರೊಬ್ಬರನ್ನು ಪೋಲೀಸಿನವರು ಹೊಡೆದಿರುವುದು

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆ ಜಮಖಂಡಿ ನಗರದಲ್ಲಿ ವಕೀಲರೊಬ್ಬರನ್ನು ಪೋಲೀಸ್‌ನವರು ಹೊಡೆದಿರೆಂದು ಕರ್ನಾಟಕದಾದ್ಯಂತ ವಕೀಲರು ಹೋರಾಟದ ಹಾದಿಗೆ ಇಳಿದಿದ್ದಾರೆ. ಕರ್ನಾಟಕದ ಎಲ್ಲಾ ರಂಗಗಳಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಿರುವ ಆಸೆಂಬ್ಲಿಯಲ್ಲೂ ಮಂತ್ರಿ ಮಂಡಲದಲ್ಲೂ ಚಾಸ್ತಿ ವಕೀಲರಿದ್ದಾರೆ, ಇಂತಹ ಒಂದು ವರ್ಗಕ್ಕೆ ಈಗಲೂ ಪೋಲೀಸ್‌ರಿಂದ ಅವಮಾನವಡಿಸುತ್ತಿದ್ದರೂ ಸರ್ಕಾರ ಕಣ್ಣು ಮುಚ್ಚಿಕೊಂಡಿರುವುದು